**OS 286/2021- PW-2**

ದಿನಾಂಕಃ **23.01.2025** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

PW-2 ರವರ ಪಾಟೀಸವಾಲು ಪ್ರತಿವಾದಿ ಪರ ಶ್ರೀ ಬಿ.ಎಸ್.ವಕೀಲರಿಂದ

ನಿಪಿ-**1** ರ **4** ನೇ ಪುಟದಲ್ಲಿ ನಿಮ್ಮ ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿ-**1** ನ್ನು ಬರೆಯುವಾಗ ವಾದಿ, ಪ್ರತಿವಾದಿಯರು ಹಾಗೂ ನಾನು ಪತ್ರ ಬರಹಗಾರರು ಹಾಜರಿದ್ದೆವು. ಇವರನ್ನು ಹೊರೆತುಪಡಿಸಿ ಬೇರೆ ಯಾರೂ ಸಹ ನಿಪಿ-**1** ಕ್ಕೆ ಸಹಿ ಮಾಡಿರುವುದಿಲ್ಲ. ನೀವು ಯಾವುದೇ ಸಹಿಯನ್ನು ಮಾಡದೇ ಹಾಗೂ ವ್ಯವಹಾರದಲ್ಲೂ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ನಿಪಿ-**1** ಕ್ಕೆ ಯಾರು ಯಾರು ಸಹಿ ಮಾಡಿದ್ದಾರೆಂದು ತಿಳಿಯದೇ ಇದ್ದರೂ ಸಹ ತಿಳಿದಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ವ್ಯವಹರಣೆಯ ಬಗ್ಗೆ ನನಗೆ ತಿಳಿದಿರುತ್ತದೆ. ವಾದಿಯ ತಾಯಿ ಹಣದ ಲೇವಾದೇವಿ ಮಾಡುತ್ತಾರೆಂದರೆ ನನಗೆ ಗೊತ್ತಿಲ್ಲ. ವಾದಿಯ ತಾಯಿ ಲೇವಾದೇವಿಯ ಭದ್ರತೆಗಾಗಿ ದಾಖಲೆಗಳನ್ನು ಮಾಡಿಸಿಕೊಳ್ಳುತ್ತಾರೆಂದರೆ ನನಗೆ ಗೊತ್ತಿಲ್ಲ. ವಾದಿಯ ತಾಯಿ ಲೇವಾದೇವಿಯಲ್ಲಿ ತೊಂದರೆಯಾದರೆ ಬರಲು ಸಾಧ್ಯವಿಲ್ಲವೆಂದು ವಾದಿಯ ಹೆಸರಿನಲ್ಲಿ ಪತ್ರಗಳನ್ನು ಮಾಡಿಸುತ್ತಾರೆಂದರೆ ನನಗೆ ಗೊತ್ತಿಲ್ಲ. ವಾದಿಯು ನನಗೆ **12** ವರ್ಷಗಳಿಂದ ಪರಿಚಯವಿರುತ್ತಾರೆ.

ವಾದಿಯು ವ್ಯವಸಾಯ ಹಾಗೂ ಅಂಗಡಿಯ ವ್ಯವಹಾರವನ್ನು ಮಾಡುತ್ತಾರೆ. ಪ್ರತಿವಾದಿಯು ಯಾವ ಕೆಲಸ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ವಾದಿಯ ನಿಮ್ಮ ಸ್ನೇಹಿತನಾಗಿರುವ ಕಾರಣ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮುಂದುವರೆದ ಮುಖ್ಯ ವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.
ಸಾ.ಓ.ಹೇ.ಸ. ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಪಾಂಡವಪುರ.